ರಾಮಾಪುರದಲ್ಲಿ ಕ್ರೀಡಾಂಗಣದ ನಿರ್ಮಾಣ

೪೭೬ ಶ್ರೀ ಚಂದ್ರಶೇಖರ್ ಮಾವಿನಿ (ಸವದತ್ತಿ)--ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ನೇ ಸಾಲಿನಲ್ಲಿ ಎನ್‌ಆರ್‌ಇಪಿ ಮೂಲಕ ಕಾಮಗಾರಿಯಲ್ಲಿ ಸವದತ್ತಿ ತಾಲ್ಲೂಕಿನ ರಾಮಾಪುರದಲ್ಲಿ ಸ್ಟೇಡಿಯಂ ನಿರ್ಮಾಣ ಮಾಡಲು ಕೆಲಸವು ಯಾವ ಹಂತದಲ್ಲಿದೆ.

ಆ) ಈ ಸ್ಟೇಡಿಯಂ ನಿರ್ಮಾಣಕ್ಕೆ ಅಂದಾಜು ಮಾಡಿದ ಹಣವೆಷ್ಟು, ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು.

ಇ) ಸ್ಟೇಡಿಯಂ ನಿರ್ಮಾಣದ ಕೆಲಸ ಈಗ ಸ್ಥಗಿತವಾಗಿರಲು ಕಾರಣವೇನು, ಹಾಗೂ ಸದರಿ ಕೆಲಸ ಪ್ರಾರಂಭಿಸಲು ವಿಚಾರ ಸರ್ಕಾರದವರಿಗೆ ಇದೆಯೇ, ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸುವರು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು) --

ಅ) ಕೆಲವು ಸಾಮಗ್ರಿಗಳನ್ನು ಸಂಗ್ರಹಿಸಿರುತ್ತದೆ.

ಆ) ಅಂದಾಜು ವೆಚ್ಚ ೧೨.೫೦ ಲಕ್ಷರೂಗಳು.
ಖರ್ಚಾದ ಹಣ ೦೦.೬೨ ಲಕ್ಷರೂಗಳು.

ಇ) ಸದರಿ ಕೆಲಸವನ್ನು ಅಭಾವ ಪರಿಹಾರ ಕಾರ್ಯಕ್ರಮಗಳಡಿಯಲ್ಲಿ ತೆಗೆದುಕೊಳ್ಳಲಾಗಿತ್ತು. ೧೯೮೬ನೇ ಜೂನ್ ಅಂತ್ಯದಲ್ಲಿ ಅಭಾವ ಪರಿಹಾರ ಕಾರ್ಯಕ್ರಮವನ್ನು ನಿಲ್ಲಿಸಿರುತ್ತದೆ. ಪ್ರಸ್ತುತ ಕಾಮಗಾರಿಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ೧೯೮೬-೮೭ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಆಳವಡಿಸಿಕೊಂಡು ಕಾರ್ಯ ಪ್ರಾರಂಭಿಸಲು ಆದೇಶವಿತ್ತಿರುತ್ತದೆ.

ಶ್ರೀ ಚಂದ್ರಶೇಖರ ಮಾವಿನಿ.--ಕೆಲವು ಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆಯೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಕನ್ನಡ ಪ್ರಾಥಮಿಕ ಶಾಲೆ ಇದೆ. ಶಾಲೆಯು ಗ್ರೌಂಡ್‌ನಲ್ಲಿ ಕಲ್ಲುಗಳು ತುಂಬಾ ಇದ್ದು, ಮಕ್ಕಳು ಆಟವಾಡುವುದಕ್ಕೆ ತೊಂದರೆಯಾಗಿದೆ. ಬೇಗನೆ ಕೆಲಸ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.--ಇದು ಆಕ್ಷನ್ ಪ್ಲಾನ್‌ನಲ್ಲಿ ಸೇರಿಲ್ಲ. ಕೆಲವು ವಸ್ತುಗಳನ್ನು ಸಂಗ್ರಹ ಮಾಡಲಾಗಿದೆ. ಈ ವರ್ಷ ಆಕ್ಷನ್ ಪ್ಲಾನ್‌ನಲ್ಲಿ ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ಅಪ್ರೂವಲ್ ಮಾಡಲಾಗಿದೆ. ಇದಕ್ಕೆ ಕೇಂದ್ರದ ಅಧಿಕಾರಿಗಳ ತಂಡ ಮಂಜೂರಾತಿ ಕೊಡಬೇಕು. ಮಂಜೂರಾತಿ ಕೊಟ್ಟ ತಕ್ಷಣ ಕೆಲಸ ಪ್ರಾರಂಭ ಮಾಡಲಾಗುವುದು.

ಶ್ರೀ ಚಂದ್ರಶೇಖರ್ ಮಾವಿನಿ.--ಅಲ್ಲಿ ಏನೊಂದು ಸಾಮಗ್ರಿಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಅದನ್ನು ತೆರವು ಮಾಡಿಸಿ, ಮಕ್ಕಳಿಗೆ ಆಟವಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಸಿಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.--ಅದನ್ನು ಮಾಡಿಸುತ್ತೇನೆ.

ಬೀಳಗಿ ತಾಲ್ಲೂಕಿನ ತೆಗ್ಗಿ ಗ್ರಾಮಕ್ಕೆ ಕಂಡಿಯುವ ನೀರಿನ ಯೋಜನೆ

೮೨೫ ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).--ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ, ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀಳಗಿ ತಾಲ್ಲೂಕಿನ ದೊಡ್ಡ ಗ್ರಾಮವಾದ ತೆಗ್ಗಿಯಲ್ಲಿ ನೀರು ಪೂರೈಕೆ ಯೋಜನೆ ಕಳೆದ ೩ ವರ್ಷಗಳಿಂದ ಅರ್ಧದಲ್ಲೇ ನಿಂತಿರುವುದು ಸರಕಾರಕ್ಕೆ ತಿಳಿದಿದೆಯೇ ?

ಆ) ಈ ಯೋಜನೆಯನ್ನು ಪೂರ್ತಿಗೊಳಿಸಲು ಜನಾರೋಗ್ಯ ಶಿಲ್ಪ ಇಲಾಖೆ ಈವರೆಗೆ ಮಾಡಿರುವ ಕೆಲಸವೆಷ್ಟು ?

ಇ) ಅದನ್ನು ಪೂರ್ಣವಾಗಲು ಎಷ್ಟು ಸಮಯ ಬೇಕು ಹಾಗೂ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ತಿಳಿದಿದೆ

ಆ) ಜಲಮೂಲದ ಸ್ಥಾಪನೆ ಬಿಟ್ಟು ಉಳಿದ ಎಲ್ಲಾ ಕೆಲಸಗಳು ಪೂರ್ಣಗೊಂಡಿರುತ್ತವೆ. ಜಲಮೂಲಕ್ಕಾಗಿ ಕೊರೆದ ಕೊಳವೆ ಭಾವಿಗಳು ವಿಫಲಗೊಂಡ ಕಾರಣ ಬದಲಿ ಜಲಮೂಲ ಸ್ಥಾಪನೆಗೆ ಪ್ರಯತ್ನಿಸಲಾಗುತ್ತಿದೆ.

ಇ) ಜಲಮೂಲದ ಸ್ಥಾಪನೆಗಾಗಿ ಭೂಗರ್ಭದ ಪರೀಕ್ಷೆಯಿಂದ ಕೊಳವೆ ಬಾವಿಯ ಸ್ಥಳವನ್ನು ಆಯ್ಕೆ ಮಾಡುವ ಕೆಲಸ ಪ್ರಗತಿಯಲ್ಲಿರುತ್ತದೆ. ಸೂಕ್ತ ಸ್ಥಳದ ಆಯ್ಕೆಯ ನಂತರ ಕೊಳವೆ ಭಾವಿಯನ್ನು ಕೊರೆದು ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ ತುಂಗಳ್.— ಸನ್ಮಾನ್ಯ ಅಧ್ಯಕ್ಷರೆ, ತೆಗ್ಗಿ ಗ್ರಾಮಕ್ಕೆ ಇತಿಹಾಸ ಇದೆ. ಕರ್ನಾಟಕದ ಇತಿಹಾಸ ಪುರುಷನಾದ ವೀರ ಸಿಂಧೂರ ಲಕ್ಷ್ಮಣ ಹುತಾತ್ಮನಾದಂಥ ಊರು ಅದು. ಆತನ ಸಮಾಧಿ ಅಲ್ಲಿಯೇ ಇದೆ. ಕಳೆದ ಮೂರು ವರ್ಷಗಳಿಂದಲೂ ಅರ್ಧದಲ್ಲಿಯೇ ನಿಂತಿರತಕ್ಕ ಒಂದು ನೀರಿನ ಟ್ಯಾಂಕ್ ಇದೆ. ಮಾನ್ಯಮಂತ್ರಿಯವರು ಜಲ ಮೂಲದ ಸ್ಥಾಪನೆ ಬಿಟ್ಟು, ಉಳಿದ ಎಲ್ಲಾ ಕೆಲಸಗಳು ಪೂರ್ಣಗೊಂಡಿರುತ್ತವೆಯೆಂದು ಹೇಳಿದ್ದಾರೆ. ಜಲವೇ ಇಲ್ಲದ ಮೇಲೆ ಬೇರೆ ಕೆಲಸಗಳ ಅವಶ್ಯಕತೆ ಏನಿದೆ ? ಈ ಊರು ಘಟಪ್ರಭಾ ನದಿಯ ಎಡ ದಂಡೆಯ ಕಡೆಗೆ ಇದೆ. ನಿಮ್ಮ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಿದರೆ ನೀರು ಸಿಗುತ್ತದೆ. ಅವರಿಗೆ ಬಿಸಿ ಮುಟ್ಟಿಸಿ ಬೇಸಿಗೆ ಕಾವೇರ್ಪಟ್ಟರೂ ನೀರು ಕೊಡುವಂಥ ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಅಬ್ದುಲ್‌ನಜೀರ್‌ಸಾಬ್.— ದುರಾದೃಷ್ಟವಶಾತ್ ಎಲ್ಲಾ ಕೆಲಸಗಳು ಮುಗಿಸಿದರೂ ಜಲ ಮೂಲ ಸಿಕ್ಕಿಲ್ಲ. ಇದು ಓವರ್‌ಬರ್ಡನ್ ಏರಿಯಾ; ದೂರದಲ್ಲಿ ನೀರು ಸಿಕ್ಕಿದರೂ ಅದನ್ನು ಬಳಸಿಕೊಂಡು ನೀರು ಕೊಡಬೇಕೆಂದು ಆದೇಶ ಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ ತುಂಗಳ್.— ಸ್ವಾಮಿ, ನಿಮ್ಮ ಭೂಗರ್ಭ ತಜ್ಞರನ್ನು ನನ್ನ ಜೊತೆಯಲ್ಲಿ ಬರುವುದಕ್ಕೆ ಹೇಳಿ, ನೀರು ತೋರಿಸುತ್ತೇನೆ ಶಾಸಕರ ಜೊತೆ ಹೋಗುವುದಕ್ಕೆ ಆದೇಶ ಕೊಡಿ.

ಶ್ರೀ ಅಬ್ದುಲ್‌ನಜೀರ್‌ಸಾಬ್.— ಇದು ವ್ಯಕ್ತಿಗತ ಸಲಹೆ ಆದರೂ ಅವರೂ ಊರಿಗೆ ಹೋಗುವ ದಿನವನ್ನು ಟೈಂ ಕೊಟ್ಟರೆ, ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇನೆ. ಇಲಾಖೆಯವರು ಒಂದು ಮಾನದಂಥ ಇಟ್ಟುಕೊಂಡು ಅದರ ಪ್ರಕಾರ ಕೆಲಸ ಮಾಡುತ್ತಿದ್ದಾರೆ.

ಕಡಿಮೆ ವೆಚ್ಚದ ಹಾಗೂ ಹುಡ್ಕೋ ಯೋಜನೆಗಳನ್ವಯದ ಮನೆಗಳು

೧೩೬೯. ಶ್ರೀ ಕೆ. ಎಚ್., ಶ್ರೀನಿವಾಸ್ (ಶಿವಮೊಗ್ಗ).— ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್‌ನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ರಿಂದ ಈವರೆಗೆ ರಾಜ್ಯದಲ್ಲಿ ಜನತಾ ಲೋಕಾಸ್ಟ್ ಹಾಗೂ ಹುಡ್ಕೋ ನೆರವು ಯೋಜನೆಗಳನ್ವಯ ಮಂಜೂರಾದ ಮನೆಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಈ ಬಗ್ಗೆ ವೆಚ್ಚ ಮಾಡಲು ಉದ್ದೇಶಿಸಿದ ಒಟ್ಟು ಮೊಬಲಗು ಎಷ್ಟು ?

ಇ) ಈ ಬಗ್ಗೆ ವಾಸ್ತವವಾಗಿ ಬಿಡುಗಡೆ ಮಾಡಿದ ಮೊಬಲಗೆಷ್ಟು ಹಾಗೂ ಪೂರ್ಣಗೊಳಿಸಿರುವ ಮನೆಗಳ ಸಂಖ್ಯೆ ಎಷ್ಟು ?

ಈ) ಮಂಜೂರಾಗಿದ್ದು ನಿರ್ಮಾಣಗೊಳ್ಳದೆ ಹಾಗೇ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ, ಪಂಚಾಯ್ತಿರಾಜ್ ವಸತಿ ಮತ್ತು ವಕ್ಫ್ ಸಚಿವರು).—

ಅ) ೧೯೮೩ರಿಂದ ಈವರೆಗೆ ರಾಜ್ಯದಲ್ಲಿ ಮಂಜೂರಾದ ಮನೆಗಳ ಸಂಖ್ಯೆ.

೧. ಜನತಾ ಲೋಕಾಸ್ಟ್ ಮನೆಗಳು	–	೪೨೨೯೦
೨. ಹುಡ್ಕೋ ಜನತಾ ಮನೆಗಳು	–	೨೦೫೫೪೫೦